# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - MONDAY 13-12-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಾಫಿ ದರ ಹೆಚ್ಚಳ

ಕಾಫಿ ದರ ಇತ್ತೀಚೆಗೆ 10 ವರ್ಷಗಳ ದಾಖಲೆ ಮಟ್ಟಕ್ಕೇರಿದ್ದು, ಬೇಡಿಕೆ ಉತ್ಪಾದನೆಗಿಂತ ಹೆಚ್ಚಳದ ನಿರೀಕ್ಷೆಯಿಂದ ದರ ಹೆಚ್ಚಳದಲ್ಲೇ ಇರುವ ಸಾಧ್ಯತೆಯಿದೆ. ಪ್ರತಿಕೂಲ ಹವಾಮಾನದಿಂದ ಪ್ರಮುಖ ಉತ್ಪಾದಕ ದೇಶವಾದ ಬ್ರೆಜಿಲ್ ದಲ್ಲಿ ಅರೆಬಿಕಾ ಕಾಫಿ ಉತ್ಪಾದನೆ ಗಣನೀಯ ಇಳಿಕೆ ಮತ್ತು ಕೊಲಂಬಿಯಾ ಮತ್ತಿತರ ದೇಶಗಳಿಂದ ಪೂರೈಕೆಯ ಸಮಸ್ಯೆಗಳಿಂದಾಗಿ ದರ ಹೆಚ್ಚಳವಾಗಿದೆ. ಪ್ರಮುಖ ಜಾಗತಿಕ ರಾಬೆಸ್ಟಾ ಕಾಫಿ ಉತ್ಪಾದಕ ದೇಶವಾದ ವಿಯೆಟ್ನಾಂ ನಲ್ಲೂ ಪ್ರತಿಕೂಲ ಹವಾಮಾನದಿಂದ ಹೊಸಬೆಳೆಯ ಕಟಾವು ವಿಳಂಬವಾಗುತ್ತಿದೆ. ಕೋವಿಡ್ ನಂತರ ಹಡಗು ಹಾಗೂ ಕಂಟೈನರ್ ಗಳ ಲಭ್ಯತೆ ಕಡಿಮೆಯಾಗಿರುವುದರಿಂದ ಜಾಗತಿಕ ಪೂರೈಕೆ ಇಳಿಕೆಯಾಗಿದ್ದು ದರ ಹೆಚ್ಚಳಕ್ಕೆ ಕಾರಣವಾಗಿದೆ. ಅರೆಬಿಕಾ ಹಾಗೂ ರಾಬೆಸ್ಟಾ ಕಾಫಿ ದರಗಳು ದಾಖಲೆ ಪ್ರಮಾಣದ ಹೆಚ್ಚಳ ಕಂಡಿವೆ. ಸದ್ಯ ಉತ್ಪಾದನೆ ಬಳಕೆಗಿಂತ ಇಳಿಕೆಯ ನಿರೀಕ್ಷೆಯಿರುವುದರಿಂದ ದರ ಹೆಚ್ಚಳದಲ್ಲಿರುವ ಸಾಧ್ಯತೆಯಿದೆ.

## ಸೋಯಮೀಲ್ ಆಮದು ಅವಧಿ ವಿಸ್ತರಣೆಯ ಯೋಜನೆಯಿಲ್ಲ

ಪೌಲ್ಟ್ರಿ ಹಾಗೂ ಪಶು ಆಹಾರ ಉತ್ಪಾದಕರ ಬೇಡಿಕೆಯಂತೆ ಸೋಯಮೀಲ್ ಆಮದು ಅವಧಿ ವಿಸ್ತರಿಸುವ ಯೋಜನೆ ಹೊಂದಿಲ್ಲವೆಂದು ಕೇಂದ್ರ ಸಚಿವ ಪೀಯೂಶ್ ಗೋಯಲ್ ಆಮದಿಗೆ ದೇಶೀ ಸೋಯಮೀಲ್ ದರ ದಾಖಲೆ ಹೆಚ್ಚಳವಿದ್ದುದರಿಂದ ಅನುಮತಿಸಿದ 1.2 ಮಿಲಿಯನ್ ಟನ್ ಆಮದಿಗೆ ಬದಲಾಗಿ 650000 ಟನ್ ಆಮದು ಮಾಡಲು ಮಾತ್ರ ಯಶಸ್ವಿಯಾಗಿ ಅನುಮತಿ ನೀಡಿದ ಪೂರ್ಣ ಪ್ರಮಾಣದ ಆಮದು ಮಾಡುವಲ್ಲಿ ವಿಫಲವಾಗಿದೆ. ರೈತರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಮುಂದೆ ಅವಧಿ ವಿಸ್ತರಣೆಯ ನಿರ್ಧಾರವಾಗಲಿದೆಯೆನ್ನಲಾಗಿದೆ.